# ಸೌಂದರ್ಯದ 'ಸ್ವಾತಿ'ಮುತ್ತು!

■ ಪ್ರವೀಣ ಕುಲಕರ್ಣಿ

'ಮಿಸ್ ವರ್ಲ್ಡ್', 'ಮಿಸಸ್ ಯೂನಿವರ್ಸ್'ನಂತಹ ಸ್ಪರ್ಧೆಗಳಲ್ಲಿ ನಡೆಯುವ ಸೌಂದರ್ಯ ಮೀಮಾಂಸೆ ಕೇವಲ ಅಂಗಸೌಷ್ಟವಕ್ಕೆ ಸಂಬಂಧಿಸಿದ್ದಲ್ಲ. ನಿಮ್ಮ ಹೃದಯ ಎಷ್ಟು ಪರಿಶುದ್ಧವಾಗಿದೆ, ನಿಮ್ಮ ಮನಸ್ಸು ಹೇಗೆ ಚಿಂತಿಸುತ್ತದೆ ಎಂಬುದನ್ನೂ ಅದು ಒಳಗೊಂಡಿದೆ' ಎನ್ನುತ್ತಾರೆ ಸ್ವಾತಿ ಉತುಕುರಿ. ಮೂರು ವಾರಗಳ ಹಿಂದಷ್ಟೇ ನಡೆದ 'ಮಿಸಸ್ ಯೂನಿವರ್ಸ್ ಯುಎಸ್‌ಎ' ಸ್ಪರ್ಧೆಯಲ್ಲಿ ಎರಡನೇ ರನ್ನರ್ ಅಪ್ ಪ್ರಶಸ್ತಿಗೆ ಪಾತ್ರವಾಗಿರುವ ಈ ಸಾಧಕಿ ಬೆಂಗಳೂರು ಮೂಲದವರು. ಸದ್ಯ ಅಮೆರಿಕದಲ್ಲಿ ನೆಲೆಸಿದವರು. ಸುಸ್ಥಿರ ಅಭಿವೃದ್ಧಿ ಮತ್ತು ಸಾಮಾಜಿಕ ಸಮಾನತೆಯ 'ರಾಯಭಾರಿ'ಯಾಗಿರುವ ಸ್ವಾತಿ, ತಮ್ಮ ಅನನ್ಯ ಚಿಂತನೆಗಳಿಂದ ಅಮೆರಿಕನ್ನರ ಗಮನ ಸೆಳೆದವರು.

ಸ್ವಾತಿ ಹುಟ್ಟಿ, ಬೆಳೆದಿದ್ದು, ಶಿಕ್ಷಣ ಪಡೆದಿದ್ದು ಎಲ್ಲವೂ ಬೆಂಗಳೂರಿನಲ್ಲಿಯೇ. ಜಯನಗರದ ವಿಜಯಾ ಪಿಯು ಕಾಲೇಜಿನಲ್ಲಿ ಓದಿರುವ ಅವರು, ಎಂ.ಎಸ್. ರಾಮಯ್ಯ ಕಾಲೇಜಿನಿಂದ ಬಯೊಮೆಡಿಕಲ್ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. 'ನನ್ನ ಇದುವರೆಗಿನ ಸಾಧನೆಯಲ್ಲಿ ನಾನು ಬೆಳೆದುಬಂದ ಪರಿಸರದ ಪಾತ್ರವೇ ದೊಡ್ಡದಾಗಿದೆ. ಬೆಂಗಳೂರಿನ ಶಿಕ್ಷಣ ನಿಸ್ಸಂದೇಹವಾಗಿ ನನ್ನಲ್ಲಿ ಮೌಲ್ಯಗಳನ್ನು ತುಂಬಿದೆ' ಎನ್ನುತ್ತಾರೆ, 33ರ ಹರೆಯದ ಸ್ವಾತಿ.

ಒಬ್ಬ ಗೃಹಿಣಿ ಮನಸ್ಸು ಮಾಡಿದರೆ ಏನೆಲ್ಲ ಮಾಡಬಹುದು, ಹೇಗೆ ಕ್ರಿಯಾಶೀಲರಾಗಿ ಇರಬಹುದು, ಸಮಾಜಕ್ಕೆ ಮಾದರಿ ಆಗಬಹುದು ಎನ್ನುವುದಕ್ಕೆ ಸ್ವಾತಿ ಉದಾಹರಣೆಯಾಗಿ ನಿಲ್ಲುತ್ತಾರೆ. ಅಮೆರಿಕದ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಮಾನವನ ಬದುಕನ್ನು ಮತ್ತಷ್ಟು ಸಲೀಸುಗೊಳಿಸಬಲ್ಲ ಹೈಟೆಕ್ ವೈದ್ಯಕೀಯ ಸಾಧನಗಳ ಆವಿಷ್ಕಾರದಲ್ಲಿ ತೊಡಗಿದ್ದಾರೆ. 'ತಂತ್ರಜ್ಞಾನವು ಮಾನವನ ಒಳಿತಿಗಾಗಿ ಬಳಕೆಯಾಗಬೇಕೇ ವಿನಾ ವಿನಾಶಕ್ಕಲ್ಲ' ಎನ್ನುವುದು ಅವರು ನಂಬಿದ ತತ್ವವಾಗಿದೆ. ಹಾಗಾಗಿಯೇ ಜಗತ್ತಿನಲ್ಲಿ ಸದ್ಯ ನಡೆದಿರುವ ಯುದ್ಧಗಳಂತಹ ಹಲವು ವಿದ್ಯಮಾನಗಳು ಅವರಲ್ಲಿ ವ್ಯಾಕುಲತೆಯನ್ನು ಉಂಟುಮಾಡಿವೆ.

ಮನೆಯಲ್ಲಿ ಮಗುವಿನ ಪಾಲಿಗೆ ಪ್ರೀತಿಯ ಅಮ್ಮ, ಕಚೇರಿಯಲ್ಲಿ ಸಮರ್ಥ ಎಂಜಿನಿಯರ್, ಸಮುದಾಯದಲ್ಲಿ ಆದರ್ಶ ನಾಯಕಿ, ಸಾಂಸ್ಕೃತಿಕ ವಲಯದಲ್ಲಿ ಅಸಾಮಾನ್ಯ ಕಲಾವಿದೆ... ಹೀಗೆ ಬಹುಮುಖಿ ಪಾತ್ರಗಳಲ್ಲಿ ಅವರು ಮಿಂಚುತ್ತಿದ್ದಾರೆ. ಸ್ವಾತಿ ಅವರೊಬ್ಬ ಕರ್ನಾಟಕ ಶಾಸ್ತ್ರೀಯ ಸಂಗೀತಗಾರ್ತಿಯೂ ಹೌದು, ಕಥಕ್ ನೃತ್ಯಗಾರ್ತಿಯೂ ಹೌದು. ವೈವಿಧ್ಯ, ಸಮಾನತೆ ಮತ್ತು ಒಳಗೊಳ್ಳುವಿಕೆ ಪರಿಷತ್‌ನ ಉಪಾಧ್ಯಕ್ಷೆಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ ಸಮಾಜದ ಒಳಿತಿಗಾಗಿ ಚಿಂತಿಸುವುದರಲ್ಲೂ ಅವರು ಸದಾ ಮುಂದು. ದಮನಿತರ ಪರವಾಗಿ ಧ್ವನಿ ಎತ್ತುವಲ್ಲಿ, ಅರ್ಹರಿಗೆ ಅವಕಾಶ ಕೊಡಿಸುವಲ್ಲಿ ಕೂಡ ಸ್ವಾತಿ ಅವರ ಮುಂದಾಳತ್ವ ಇದ್ದೇ ಇರುತ್ತದೆ. ಇಂತಹ ಸಾಧಕಿ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಏಕೆ ಎಂಬ ಪ್ರಶ್ನೆ ನಿಮ್ಮದಾದರೆ ಅವರ ಬಳಿ ಅದಕ್ಕೂ ಉತ್ತರವಿದೆ. 'ಸೌಂದರ್ಯ ಸ್ಪರ್ಧೆ ಎಂದರೆ ಕೇವಲ ಪ್ರದರ್ಶನವಲ್ಲ. ನಮ್ಮ ಹೃದಯಕ್ಕೆ ಹತ್ತಿರವಾದ ವಿಷಯಗಳನ್ನು ಸಮುದಾಯಕ್ಕೆ ಮುಟ್ಟಿಸಲು ದೊಡ್ಡದೊಂದು ವೇದಿಕೆ. ಇದೇ ಕಾರಣದಿಂದಲೇ ನಾನು ಸ್ಪರ್ಧೆಯಲ್ಲಿ ಭಾಗವಹಿಸಿದೆ.'



'ನನ್ನ ಮೈಬಣ್ಣದ ಕುರಿತು ನನಗೆ ಒಂದಿನಿತೂ ಕೀಳರಿಮೆ ಇಲ್ಲ. ಬದಲಾಗಿ ಅಪರಿಮಿತ ಗೌರವವಿದೆ. ಇದರಿಂದ ನನ್ನ ಆತ್ಮವಿಶ್ವಾಸ ಹೆಚ್ಚಿದೆ. ಸಾಧನೆಗೆ ದಾರಿಯನ್ನೂ ತೆರೆದಿದೆ...' ಎಂದು ತುಸುವೂ ಗೊಂದಲಕ್ಕೆ ಆಸ್ಪದ ಇಲ್ಲದಂತೆ ಸ್ವಾತಿ, ಪಟಪಟನೆ ಹೇಳುತ್ತಾರೆ. ತಾವೊಬ್ಬ ನೈಜ ನಾಯಕಿ ಎಂಬುದನ್ನು ನಿರೂಪಿಸುತ್ತಾರೆ. ಕುವೆಂಪು ಅವರ ವಿಶ್ವಮಾನವ ಸಂದೇಶ ಮತ್ತು ನಿರಂಕುಶಮತಿಗಳಾಗಿ ಎಂಬ ಕರೆ ಈ ಅಮೆರಿಕನ್ನಡತಿಗೆ ಅಚ್ಚುಮೆಚ್ಚಂತೆ. ನಮ್ಮ ಜೀವನ ಸರಳವಾಗಿರಬೇಕು, ಸಹಜ ಮಾರ್ಗದಲ್ಲಿ ನಾವು ಸಾಗಬೇಕು ಎನ್ನುವುದು ಅವರ ಬದುಕಿನ ಫಿಲಾಸಫಿಯಾಗಿದೆ.

ಲಿಂಗ ಸಮಾನತೆ, ಮಾನಸಿಕ ಆರೋಗ್ಯ ಮತ್ತು ಮಹಿಳಾ ನಾಯಕತ್ವ – ಈ ಮೂರೂ ಕ್ಷೇತ್ರಗಳಲ್ಲಿ ತುಂಬಾ ಕೆಲಸಗಳು ಆಗಬೇಕಿವೆ. ಆ ನಿಟ್ಟಿನಲ್ಲಿ ನಾನು ಕಾರ್ಯಪ್ರವೃತ್ತಳಾಗುವೆ ಎಂದೆನ್ನುತ್ತಾರೆ ಸ್ವಾತಿ. ಅವರ ದೃಷ್ಟಿಯಲ್ಲಿ ಆರೋಗ್ಯ ಮತ್ತು ಶಿಕ್ಷಣ ಇವೆರಡೂ ಸಮುದಾಯವನ್ನು ಪ್ರಗತಿಯತ್ತ ಮುನ್ನಡೆಸುವ ಚಕ್ರಗಳು. ಇಂದಿನ ಪ್ರಪಂಚದಲ್ಲಿ ಶಿಕ್ಷಣದ ಅವಕಾಶಗಳು ಹೆಚ್ಚಿದ್ದರೂ ಹೊಸಪೀಳಿಗೆಗೆ ಗುಣಮಟ್ಟದ ಮತ್ತು ಸುಸ್ಥಿರ ಶಿಕ್ಷಣ ಸಿಗುತ್ತಿಲ್ಲ ಎಂಬ ನೋವು ಅವರನ್ನು ಕಾಡುತ್ತಿದೆ.

ತಮ್ಮ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಬೆಂಗಳೂರಿನ ಪಾತ್ರವನ್ನು ವಿಶೇಷವಾಗಿ ಸ್ಮರಿಸುವ ಸ್ವಾತಿ, ಮಾನವೀಯತೆ ಮತ್ತು ಸೇವೆಯ ಎರಡು ಮಂತ್ರಗಳನ್ನು ಹೇಳಿಕೊಟ್ಟ ಪ್ರೀತಿಯ ಊರು ಅದು ಎಂದು ಹೇಳುತ್ತಾರೆ. 'ಪ್ರತಿಯೊಬ್ಬ ಮಹಿಳೆಯಲ್ಲೂ ನಾಯಕತ್ವದ ಶಕ್ತಿ ಇದೆ ಎಂಬುದಾಗಿ ನಾನು ಬಲವಾಗಿ ನಂಬಿದ್ದೇನೆ. ಸಮಾಜದಲ್ಲಿ ಅವಳಿಗೆ ಅರ್ಥಪೂರ್ಣ ಬದಲಾವಣೆ ತರುವ ಸಾಮರ್ಥ್ಯವೂ ಇದೆ. ಈ ಸಂದೇಶವನ್ನು ಸಮಾಜದ ಪ್ರತಿಯೊಬ್ಬ ಮಹಿಳೆಯವರೆಗೂ ಒಯ್ಯಬೇಕು. ಅವರಲ್ಲೂ ಸ್ಫೂರ್ತಿ ತುಂಬಿ, ಸಕಾರಾತ್ಮಕ ಬದಲಾವಣೆಗೆ ಕಾರಣವಾಗಬೇಕು ಎನ್ನುವುದು ನನ್ನ ಆಸೆ' ಎಂದು ವಿವರಿಸುತ್ತಾರೆ. ಈ ಮಹಿಳಾ ಚಾಂಪಿಯನ್‌ಗೆ ನಮ್ಮ ಅಭಿನಂದನೆಯನ್ನೂ ಹೇಳೋಣ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65